## ಅಧ್ಯಾಯ ಐದು

# ಒಟ್ಟು ಅಧ್ಯಯನದಿಂದ ಒಡಮೂಡಿದ ತೀರ್ಮಾನಗಳು

# ಅಧ್ಯಾಯ ಐದು

## ಒಟ್ಟು ಅಧ್ಯಯನದಿಂದ ಒಡಮೂಡಿದ ತೀರ್ಮಾನಗಳು

ಒಟ್ಟು ಅಧ್ಯಯನದಿಂದ ಭಾರತೀಯ ಸ್ವಾತಂತ್ರ್ಯ ಹೋರಾಟದ ಅವಧಿಯ ದಕ್ಷಿಣ ಭಾರತ ದಲಿತ ಚಳುವಳಿಯನ್ನು ಸಮಗ್ರವಾಗಿ ಪರಿಶೀಲಿಸಲಾಗಿದೆ. ದಲಿತ ಚಳುವಳಿ ಕೇವಲ ಒಂದು ಪ್ರಾದೇಶಿಕ ಮಟ್ಟಕ್ಕೆ ಸೀಮಿತವಾಗಿರದೆ, ಅಂದು ಪ್ರತಿ ರಾಜ್ಯಗಳಲ್ಲೂ, ಸ್ವಾತಂತ್ರ್ಯ ಚಳುವಳಿಯ ಆರಂಭದಿಂದಲೂ ದಲಿತ ಚಳುವಳಿ ಕಂಡು ಬಂದಿದ್ದು, ನಿರಂತರ ಹೋರಾಟವನ್ನು ಸಂಘಟನೆಗಳ ಮೂಲಕ ನಡೆಸಿರುವುದಕ್ಕೆ ದಕ್ಷಿಣ ಭಾರತ ರಾಜ್ಯಗಳ ದಲಿತ ಚಳುವಳಿ ಸಾಕ್ಷಿಯಾಗಿದೆ. ಆ ಅವಧಿಯ ದಲಿತ ಚಳುವಳಿ, ಅಂಬೇಡ್ಕರ್ ಮತ್ತು ದಲಿತ ನಾಯಕತ್ವ ಅಧ್ಯಯನಕ್ಕೆ ಸೀಮಿತವಾಗಿದ್ದರಿಂದ, ಈ ಅಧ್ಯಯನದಿಂದಾಗಿ ದಲಿತ ಚಳುವಳಿಯ ಚರಿತ್ರೆ ವಿಸ್ತಾರತೆ ಪಡೆಯುವುದರೊಂದಿಗೆ, ಅಂಬೇಡ್ಕರ್ ಪೂರ್ವದಲ್ಲಿ ಮತ್ತು ಅಂಬೇಡ್ಕರ್ ಯುಗದಲ್ಲೂ ದಲಿತ ಚಳುವಳಿ ಎಲ್ಲಾ ರಾಜ್ಯಗಳಲ್ಲೂ ಪ್ರಬಲವಾಗಿ ಹೋರಾಟ ನಡೆಸಿರುವ ಸತ್ಯಾಂಶಗಳು ಪ್ರತಿಬಿಂಬಿತವಾಗುತ್ತವೆ. ದಲಿತ ಚಳುವಳಿಯೆನ್ನುವುದು ದಕ್ಷಿಣ ಭಾರತದ ರಾಜ್ಯಗಳಲ್ಲಿ ಸ್ವಾತಂತ್ರ್ಯ ಚಳುವಳಿಯ ಜೊತೆಯಲ್ಲೇ, ತಮ್ಮ ಹಕ್ಕುಗಳಿಗಾಗಿ ಸಂಘಟನೆ ಮೂಲಕ ಹೋರಾಟ ನಡೆಸಿರುವ ಸ್ವರೂಪ, ಈ ಸಂಶೋಧನಾ ಅಧ್ಯಯನದಿಂದ ದೃಢಪಟ್ಟಿದೆ. ಅಧ್ಯಯನದಿಂದ ದೊರೆತ ಮುಖ್ಯ ಅಂಶಗಳನ್ನು ಮುಂದೆ ಸಂಕ್ಷಿಪ್ತವಾಗಿ ಪ್ರಸ್ತಾಪಿಸಲಾಗಿದೆ.

ಮೊದಲನೆಯದಾಗಿ, ದಲಿತ ಪದದ ಅರ್ಥ, ಪರಿಕಲ್ಪನೆ ಮತ್ತು ದಲಿತರು ಯಾರು? ಎಂಬುದು ಸಮಸ್ಯಾತ್ಮಕವಾಗಿದೆ. ಈ ಅಧ್ಯಯನ ದಲಿತ ಚಳುವಳಿಯನ್ನು ಕೇಂದ್ರಿಕರಿಸಿದರಿಂದ ದಲಿತ ಪದದ ಅರ್ಥ, ಪರಿಕಲ್ಪನೆ ಮತ್ತು ದಲಿತರು ಯಾರು? ಎಂಬುದನ್ನು ಪರಿಶೀಲಿಸಿ ಒಂದು ತೀರ್ಮಾನಕ್ಕೆ ಬರಲಾಗಿದೆ. ಸ್ವಾತಂತ್ರ್ಯ ಹೋರಾಟದ ಅವಧಿಯ ದಲಿತ ಚಳುವಳಿಯ ಅಧ್ಯಯನವಾದರಿಂದ, ಸ್ವಾತಂತ್ರ್ಯ ಪೂರ್ವದ ಅಸ್ಪೃಶ್ಯ(ದಲಿತ)ರನ್ನು ಗುರುತಿಸಲಾಗಿದೆ. ನಿಘಂಟುಗಳು ನೀಡುವ ಅರ್ಥಗಳು, ಚಿಂತಕರು ನೀಡುವ ಅರ್ಥಗಳು ಭಿನ್ನವಾಗಿದ್ದರೂ, ಶತಶತಮಾನಗಳಿಂದಲೂ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಹಕ್ಕುಗಳಿಂದ ವಂಚಿತವಾಗಿ, ಶೋಷಣೆ, ದೌರ್ಜನ್ಯದ ಜೊತೆಗೆ ಅಸ್ಪೃಶ್ಯತೆಯ ನೋವನ್ನು ಅನುಭವಿಸಿರುವ ಸಮುದಾಯವನ್ನು ಮಾತ್ರ ದಲಿತರೆಂದು ಪರಿಗಣಿಸಲಾಗಿದೆ. ಅಂದು ಅಸ್ಪೃಶ್ಯರನ್ನು ದೇಶದ ನಾನಾ ಕಡೆ ಮಾಲರು,

ಮಾದಿಗರು, ಪುಲಯ, ತಿಯ್ಯಾ, ಪರಯ್ಯ, ಅಂತ್ಯಜ, ಮಹಾರ ಮುಂತಾದ ಭಿನ್ನ ಹೆಸರುಗಳಿಂದ ಗುರುತಿಸಲ್ಪಡುತ್ತಿದ್ದ ಅಸ್ಪೃಶ್ಯರೆ, ದಲಿತರು. ಕಾಲ ಕಾಲಕ್ಕೆ ಭಿನ್ನ ವ್ಯಾಖ್ಯಾನಗಳಿಗೆ ದಲಿತ ಪದ, ಪರಿಕಲ್ಪನೆ ಒಳಗಾದರೂ, ಕೇವಲ ಶೋಷಣೆಗೆ ಒಳಗಾದವರನ್ನು ಪರಿಗಣಿಸದೇ, ಶೋಷಣೆಯ ಜೊತೆಗೆ ಎಲ್ಲಾ ರೀತಿಯ ಹಿಂಸೆ, ಕೌರ್ಯ, ಅಪಮಾನ, ಅಸ್ಪೃಶ್ಯತೆಯಂತ ಅವಮಾನಿತ ಬದುಕು ಸವೆಸಿದ ವರ್ಗವನ್ನು 'ದಲಿತ' ಪದ ವ್ಯಾಪ್ತಿಯಲ್ಲಿ ಪರಿಗಣಿಸಬೇಕೆಂಬುದು ಈ ಅಧ್ಯಯನ ಆರಂಭದಲ್ಲಿ ಸ್ಪಷ್ಟಪಡಿಸುತ್ತದೆ. ಹಾಗಾಗಿ, ಎಲ್ಲಾ ಕಾಲಘಟ್ಟದಲ್ಲೂ ದಲಿತ ಎಂಬುದು ಒಂದೇ ರೀತಿಯ ಸಾಮಾಜಿಕ, ಆರ್ಥಿಕ, ರಾಜಕೀಯ ಸಾಂಸ್ಕೃತಿಕ ಸ್ಥಾನತೆಯನ್ನು ಹೊಂದಿರದೆ ಇರುವುದರಿಂದ, ಸ್ವಾತಂತ್ರ್ಯ ಪೂರ್ವ ದಲಿತ ಪರಿಕಲ್ಪನೆಯನ್ನು ಮಾತ್ರ ಈ ಅಧ್ಯಯನದಲ್ಲಿ ಪೂರ್ಣವಾಗಿ ಪರಿಭಾವಿಸುವ ಮೂಲಕ, ಯಾವುದೇ ಗೊಂದಲ, ಭಿನ್ನಾಭಿಪ್ರಾಯಗಳಿಗೆ ಆಸ್ಪದ ನೀಡಿಲ್ಲ. ಮೂಲ ಅಸ್ಪೃಶ್ಯರನ್ನೆ ದಲಿತರೆಂದು ಪರಿಗಣಿಸಲಾಗಿದೆ.

ಎರಡನೇಯದಾಗಿ, ಶತಮಾನಗಳಿಂದಲೂ ಮೂಕರಾಗಿ ಮೇಲ್ವರ್ಗದ ದೌರ್ಜನ್ಯ, ಶೋಷಣೆ, ಅಸ್ಪೃಶ್ಯತೆಯ ನೋವನ್ನು ಅನುಭವಿಸಿಕೊಂಡು ಬಂದ ದಲಿತ ಸಮುದಾಯ, ತಮ್ಮಹಕ್ಕುಗಳಿಗಾಗಿ ನಡೆಸಿದ ಚಳುವಳಿಯ ಹಿಂದೆ, ಅವರ ಜಾಗೃತಿ ಪ್ರಧಾನ ಪಾತ್ರವಹಿಸುತ್ತದೆ. ದಲಿತರ ಜಾಗೃತಿ ಆದದ್ದು ಸ್ವಾತಂತ್ರ್ಯ ಚಳುವಳಿ ಅಥವಾ ಬ್ರಿಟೀಷ್ ಆಡಳಿತ ಅವಧಿಯೆಂಬುದು ಗಮನಾರ್ಹವಾಗಿದೆ. ಆದರಲ್ಲಿ ದಲಿತರಲ್ಲಾದ ಶೈಕ್ಷಣಿಕ ಜಾಗೃತಿಯ ಅಂಶಗಳು ಅವರ ಹೊಸ ಬದುಕಿನ ಪುಟಗಳನ್ನೆ ತೆರೆದ ಅಂಶಗಳನ್ನಾಗಿ ಚರ್ಚಿಸಲಾಗಿದೆ. ಮೇಲ್ವರ್ಗದಿಂದ ವಂಚಿತವಾದ ಶಿಕ್ಷಣ ಬ್ರಿಟೀಷ್ ಸರ್ಕಾರ, ಮಿಷನರಿಗಳು ಮತ್ತು ಸಂಸ್ಥಾನಿಕ ರಾಜರುಗಳಿಂದ ಹೇಗೆ ದಲಿತರಿಗೆ ದೊರಕಲ್ಪಟ್ಟಿತ್ತು, ಎಂಬುದನ್ನು ಹಂತ ಹಂತವಾಗಿ ಪರಿಶೀಲಿಸಲಾಗಿದೆ. ದಲಿತರು ಸಂಘಟನೆಗಳ ಮೂಲಕ ಚಳುವಳಿ ನಡೆಸಲು ಅವರಲ್ಲಾದ ಶೈಕ್ಷಣಿಕ ಜಾಗೃತಿಯಾಗಿದೆ. ಆರಂಭದಲ್ಲಿ ದಲಿತರು ಶಿಕ್ಷಣ ಪಡೆದುಕೊಳ್ಳಲು ಎದುರಿಸಿದ ಸಮಸ್ಯೆ, ಬ್ರಿಟೀಷ್ ಸರ್ಕಾರ, ಮಿಷನರಿಗಳು ಕೈಗೊಂಡ ಕ್ರಮಗಳ ಕುರಿತ ಚರ್ಚೆ ಪ್ರಮುಖವಾಗಿದೆ. ಪ್ರತಿ ರಾಜ್ಯಗಳಲ್ಲೂ ದಲಿತರು ಅಂದು ಪಡೆದ ಶೈಕ್ಷಣಿಕ ಜ್ಞಾನದ ಪ್ರಭಾವ, ತಮ್ಮ ಬದುಕಿನ ವಂಚಿತ ಹಕ್ಕು, ದೌರ್ಜನ್ಯ, ಶೋಷಣೆ ವಿರುದ್ಧ ದಲಿತ ಅನನ್ಯತೆಯಿಂದ ಪ್ರಬಲ ಸಂಘಟನೆಗಳ ಮೂಲಕ ಚಳುವಳಿ ನಡೆಸಲು ಪ್ರೇರಕವಾಗಿತೆಂದು ಅಧ್ಯಯನದಿಂದ ದೊರೆತ ಅಂಶಗಳಿಂದ ಸ್ಪಷ್ಟವಾಗುತ್ತದೆ.

ದಲಿತ ಚಳುವಳಿ ಎಂದಾಕ್ಷಣ ಅದು ಸಂಘಟನಾ ರಹಿತ ಚಳುವಳಿಯೆಂದು ಗುರುತಿಸಲು ಸಾಧ್ಯವಿಲ್ಲ. ದಲಿತ ಸಂಘಟನೆಯ ಉಗಮ ಮತ್ತು ಚಳುವಳಿ ಕಾಣಿಸಿಕೊಂಡಿದ್ದು ಸ್ವಾತಂತ್ರ್ಯ ಚಳುವಳಿಯ ಆರಂಭದ ದಶಕದಲ್ಲೆ, ಎಂಬುದು ಕಂಡುಬರುತ್ತದೆ. ದಲಿತ ಚಳುವಳಿ, ಸಂಘಟನೆ, ಅಂಬೇಡ್ಕರ್ ನಾಯಕತ್ವದ ಹೋರಾಟದಲ್ಲಿ ಮಾತ್ರ ಕಂಡು ಬರದೆ, ಸ್ವಾತಂತ್ರ್ಯ ಹೋರಾಟದ ಆರಂಭದಿಂದಲೇ ತಮ್ಮ ಉದ್ದೇಶಿತ ಗುರಿಯೆಡೆಗೆ ಸಂಘಟನೆ ಮತ್ತು ಚಳುವಳಿಯೆಡೆಗೆ ಹೆಜ್ಜೆಯಿರಿಸಿರುವ ಅಂಶಗಳು ಕಂಡುಬರುತ್ತವೆ. ಆಯಾ ಸಮುದಾಯದ ಜಾತಿಯವರು ತಮ್ಮ ಸಮುದಾಯಗಳ ಹಿತರಕ್ಷಣೆ, ಉದ್ಧಾರ ಕಾರ್ಯಕ್ಕೆ ಸಂಘಟಿತಗೊಳ್ಳುತ್ತಿರುವಾಗ, ಶೋಷಿತ ದಲಿತರು ಸಹ ತಮ್ಮ ಸಮುದಾಯದ ಹಿತರಕ್ಷಣೆ, ಉದ್ಧಾರಕ್ಕೆ ಸಂಘಟಿತಗೊಂಡು ಹಕ್ಕುಗಳಿಗಾಗಿ ಚಳುವಳಿ ನಡೆಸಿರುವರು. ಶಿಕ್ಷಣದಿಂದ ಜಾಗೃತಗೊಂಡ ವಿದ್ಯಾವಂತ ದಲಿತರು ಆ ಸಂದರ್ಭದಲ್ಲಿ ದಲಿತರನ್ನು ಒಗ್ಗೂಡಿಸಿ, ಸಂಘಟನೆಯೆಂಬ ವೇದಿಕೆಗೆ ತರಲು ಪ್ರಯತ್ನಿಸಿದರು. ಅಂತಹ ಆರಂಭದ ಸಂಘಟನೆಗಳೆಂದರೆ, 1886ರಲ್ಲಿ ಗೋಪಾಲಬಾಬಾ ವಾಲಂಗಕರ್‌ರವರಿಂದ ಮಹಾರಾಷ್ಟ್ರ ಜಿಲ್ಲೆಯ ದೋಪಾಲಿಯಲ್ಲಿ ಅನಾರ್ಯದೋಷ ಪರಿಹಾರ ಮಂಡಳಿ ಸ್ಥಾಪನೆ, 1890ರಲ್ಲಿ ಸ್ಥಾಪಿತವಾದ ಆದಿ-ದ್ರಾವಿಡ ಮಹಾಸಭಾ, 1892ರಲ್ಲಿ ಜಾನ್‌ರತ್ನಂರವರ ದ್ರಾವಿಡ ಕಜಾಗಂ, 1906ರಲ್ಲಿ ಭಾರತೀಯ ನಿಮ್ನ ವರ್ಗಗಳ ಮಿಷನ್, ಇತ್ಯಾದಿ. ಇವುಗಳೆಲ್ಲಾ ಮೂಲ ಉದ್ದೇಶ, ಗುರಿ ಸಾಧನೆಗಾಗಿ ಆರಂಭದಲ್ಲೆ ಹಕ್ಕುಗಳಿಗಾಗಿ ಸಂಘಟಿತಗೊಂಡವುಗಳಾಗಿ ಕಂಡುಬಂದಿವೆ. ಇವುಗಳೇ ಮುಂದೆ, ಪ್ರಬಲ ದಲಿತ ಸಂಘಟನೆ ಮತ್ತು ಚಳುವಳಿಗೆ ಪ್ರೇರಕವಾದವು.

ದಲಿತ ಚಳುವಳಿ ತನ್ನ ಉಗಮ ಆರಂಭ ಬಿಂದುವಿನಿಂದಲೂ, ತನ್ನದೇ ಆದ ತತ್ವ. ಸಿದ್ಧಾಂತದ ನೆಲೆಯಲ್ಲೇ ನಡೆದು ಬಂದಿರುವುದು ಕಂಡುಬರುತ್ತದೆ. ಮೊದಲು ದೌರ್ಜನ್ಯ, ಶೋಷಣೆ ವಿರುದ್ಧ, ಜಾತಿ ವಿರೋದಿ ಚಳುವಳಿಯಾಗಿ ಕಾಣಿಸಿಕೊಂಡರೂ, 1885ರಿಂದ ಮಾತ್ರ ದಲಿತರ ಸಂಘಟಿತ ಚಳುವಳಿಯಾಗಿ ಕಂಡು ಬಂದಿರುವುದು ಸ್ಪಷ್ಟವಾಗುತ್ತದೆ. ದಲಿತರಿಗೆ ಸಿಗಬೇಕಾದ ಸಮಾನ ಹಕ್ಕು, ನಿರ್ದಿಷ್ಟ ಗುರಿ ಸಾಧನೆಗಾಗಿ ದಲಿತರನ್ನು ಒಂದೆಡೆ ಸೇರಿಸಿ ಸಂಘಟಿತವಾಗಿ ಚಳುವಳಿ ನಡೆಸಿರುವುದು ಸ್ವಾತಂತ್ರ್ಯ ಚಳುವಳಿ ಅವಧಿಯ ಕೊನೆಯ ಹಂತದವರೆಗೂ ಕಂಡುಬರುತ್ತದೆ. ದಲಿತ ಚಳುವಳಿಯಲ್ಲಿ ದಲಿತರ ನಾಯಕತ್ವ ಮತ್ತು ದಲಿತರ ಪರ ದಲಿತೇತರ ನಾಯಕತ್ವದ ಸ್ವರೂಪವು ಗಮನಾರ್ಹವಾಗಿದೆ. ದಲಿತ ಚಳುವಳಿ ಸ್ವಾತಂತ್ರ್ಯ ಚಳುವಳಿ ಅವಧಿಯಲ್ಲಿ ಕಂಡು ಬಂದಿದ್ದು, ದಲಿತರು ಸಂಘಟಿತ ಹೋರಾಟವನ್ನು ನಡೆಸಿರುವರು.

ಮೂರನೇಯದಾಗಿ, ಈ ಅಧ್ಯಯನ ಸ್ವಾತಂತ್ರ್ಯ ಹೋರಾಟದ ಅವಧಿಯ ದಕ್ಷಿಣ ಭಾರತದ ದಲಿತ ಚಳುವಳಿಯಾಗಿರುವುದರಿಂದ, ಅಂಬೇಡ್ಕರ್ ಪೂರ್ವಯುಗ ಮತ್ತು ಅಂಬೇಡ್ಕರ್ ಯುಗದ ದಕ್ಷಿಣ ಭಾರತದ ದಲಿತ ಚಳುವಳಿಯಾಗಿ ಪರಿಶೀಲಿಸಲಾಗಿದೆ. ದಕ್ಷಿಣ ಭಾರತದ ರಾಜ್ಯಗಳಾದ ಆಂಧ್ರ ಪ್ರದೇಶ, ತಮಿಳುನಾಡು, ಕರ್ನಾಟಕ ರಾಜ್ಯ ಮತ್ತು ಕೇರಳ ರಾಜ್ಯಗಳಲ್ಲಿ ಸ್ವಾತಂತ್ರ್ಯ ಚಳುವಳಿ ಆರಂಭದಿಂದ, ಕಂಡು ಬಂದ ದಲಿತ ಸಂಘಟನೆ, ಚಳುವಳಿಯನ್ನು ಸಮಗ್ರವಾಗಿ ಚರ್ಚಿಸಲಾಗಿದೆ. ದಕ್ಷಿಣ ಭಾರತದ ಪ್ರತಿರಾಜ್ಯಗಳಲ್ಲೂ ದಲಿತರು ಜಾಗೃತಗೊಂಡು ತಮ್ಮ ಹಕ್ಕುಗಳಿಗಾಗಿ ನಡೆಸಿರುವ ಚಳುವಳಿ ಗಮನಾರ್ಹವಾಗಿದೆ. ಅಂಬೇಡ್ಕರ್ ಪೂರ್ವಯುಗದ ದಲಿತ ಚಳುವಳಿಯಲ್ಲಿ ಆಂಧ್ರ ಪ್ರದೇಶದ ದಲಿತ ಚಳುವಳಿಯನ್ನು ಗಮನಿಸಿದಾಗ, ಭಾಗ್ಯರೆಡ್ಡಿವರ್ಮ, ಗುಡುರು ರಾಮಚಂದ್ರರಾವ್, ಆರಿಗಯ್ಯ ರಾಮಸ್ವಾಮಿ, ಬಿ.ಎಸ್.ವೆಂಕಟರಾವ್, ಎಂ.ಎಲ್ ಜಾದಯ್ಯ, ಬಿ. ಶ್ಯಾಮಸುಂದರರಾವ್ ಮತ್ತು ಜೆ.ಹೆಚ್. ಸುಬ್ಬಯ್ಯ ಮುಂತಾದ ಪ್ರಮುಖ ದಲಿತ ನಾಯಕರು, ದಲಿತರಲ್ಲಿ ಜಾಗೃತಿಯನ್ನುಂಟು ಮಾಡುವುದರೊಂದಿಗೆ ಅವರನ್ನು ಸಂಘಟಿಸಿ, ಸಮಾನತೆಯ ಹಕ್ಕುಗಳಿಗಾಗಿ ಆಂಧ್ರ ಪ್ರದೇಶದಲ್ಲಿ ದಲಿತ ಚಳುವಳಿಯನ್ನು ಪ್ರಬಲಗೊಳಿಸಿರುವ ಅಂಶಗಳು ಪ್ರಮುಖವಾಗಿ ಕಂಡುಬರುತ್ತವೆ.

ಆಂಧ್ರಪ್ರದೇಶದಲ್ಲಿ ಪ್ರಥಮವಾಗಿ ದಲಿತರ ಜಾಗೃತಿ ಮತ್ತು ಉದ್ದಾರಕ್ಕಾಗಿ ದಲಿತರ ನೇತೃತ್ವದಲ್ಲೇ 1906ರಲ್ಲಿ ಸಂಘಟಿತಗೊಂಡ ದಲಿತ ಸಂಘಟನೆ ಜಗನ್‌ಮಿತ್ರ ಮಂಡಳಿಯಾಗಿದೆ. ಶ್ರೀಭಾಗ್ಯರೆಡ್ಡಿವರ್ಮರವರಿಂದ ಸ್ಥಾಪಿತವಾದ ಈ ಸಂಘಟನೆ ಆರಂಭದಲ್ಲಿ, ದಲಿತರನ್ನು ಜಾಗೃತಗೊಳಿಸುವುದರೊಂದಿಗೆ ಅವರನ್ನು ಸುಧಾರಿಸುವ ಕಾರ್ಯ ಮಾಡಿರುವುದು ಕಂಡುಬರುತ್ತದೆ. ನಂತರ ಮಾನ್ಯ ಸಂಘಂ, ಸುನೀತಿ ಬಾಲಾ ಸಮಾಜಂ, ಮೊದಲ ಆದಿ-ಆಂಧ್ರ ಮಹಾಜನ ಸಭಾ ಸಂಘಟನೆಗಳು ಆಂಧ್ರದ ದಲಿತರನ್ನು ಜಾಗೃತಗೊಳಿಸಿ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ರಾಜಕೀಯ ಹಕ್ಕುಗಳಿಗಾಗಿ ಚಳುವಳಿ ನಡೆಸಿರುವುದು ಸ್ಪಷ್ಟವಾಗುತ್ತದೆ. ಈ ಸಂಘಟನೆಗಳು ಮುಂದೆ ಆಂಧ್ರ ಪ್ರದೇಶದ ದಲಿತ ಚಳುವಳಿಯನ್ನು ಅಂಬೇಡ್ಕರ್ ನಾಯಕತ್ವದಲ್ಲಿ ಪ್ರಬಲಗೊಳಿಸಿತು ಎಂಬುದು ಗಮನಕ್ಕೆ ಬರುತ್ತದೆ. ಹಾಗಾಗಿ, ಅಂಬೇಡ್ಕರ್ ಪೂರ್ವದಲ್ಲೇ ಆಂಧ್ರದ ದಲಿತರು ಜಾಗೃತಗೊಂಡು ತಮ್ಮ ವಂಚಿತ ಹಕ್ಕುಗಳಿಗೆ ಸಂಘಟನೆಗಳ ಮೂಲಕ ಚಳುವಳಿ ನಡೆಸಿರುವುದು ಸ್ಪಷ್ಟವಾಗುತ್ತದೆ.

ತಮಿಳುನಾಡಿನಲ್ಲಿ, ಅಂಬೇಡ್ಕರ್ ಪೂರ್ವಯುಗದಲ್ಲಿ ದಲಿತ ಸಂಘಟನೆ ಮತ್ತು ಚಳುವಳಿಗಳು ನಡೆದಿರುವ ಅಂಶಗಳು ಕಂಡುಬರುತ್ತದೆ. ಪಂಡಿತ ಸಿ. ಐಯೊಧಿದಾಸ್, ಜಾನ್‌ರತ್ನಂ, ದಿವಾನ್ ಬಹದ್ದೂರ್ ಶ್ರೀನಿವಾಸನ್, ಐರವತನಾಯರ್, ಟಿ.ಬಿ. ಪಾಂಡಿಯನ್ ಮತ್ತು ಗುರುಸ್ವಾಮಿ ಮುಂತಾದವರು ತಮಿಳುನಾಡಿನ ದಲಿತ ಚಳುವಳಿಯಲ್ಲಿ ಗುರುತಿಸಿಕೊಳ್ಳುವರು. ಇವರ ನೇತೃತ್ವದಲ್ಲಿ ಆದಿ-ದ್ರಾವಿಡ ಮಹಾಜನಸಭಾ, ಸೌತ್ ಇಂಡಿಯಾ ಪೀಪಲ್ಸ್ ಆಸೋಸಿಯೇಷನ್, ಡಿಪ್ರೆಸೆಡ್ ಕ್ಲಾಸಸ್ ಮಿಷನ್ ಸೊಸೈಟಿ ಆಫ್ ಇಂಡಿಯಾ, ಡಿಪ್ರೆಸೆಡ್ ಕ್ಲಾಸಸ್ ಇಲಿವೆಷನ್ ಸೊಸೈಟಿ ಆಫ್ ಸೌತ್ ಇಂಡಿಯಾ ಮತ್ತು ನಂದನರ್ ಮಹಾಜನ ಸಭಾ ಮುಂತಾದ ಸಂಘಟನೆಗಳು ದಲಿತರ ಜಾಗೃತಿ, ಅಭಿವೃದ್ಧಿ ಮತ್ತು ಹಕ್ಕುಗಳಿಗಾಗಿ ನಿರಂತರ ಹೋರಾಟ ನಡೆಸಿರುವ ಪ್ರಮುಖ ಸಂಘಟನೆಗಳಾಗಿ ತಮಿಳುನಾಡಿನಲ್ಲಿ ಕಾಣಿಸಿಕೊಳ್ಳುತ್ತವೆ. 1890ರಲ್ಲಿ ಪಂಡಿತ ಸಿ. ಐಯೋದಿದಾಸ್‌ರವರಿಂದ ಮೊದಲಿಗೆ ತಮಿಳುನಾಡಿನಲ್ಲಿ ಸ್ಥಾಪಿತವಾದ ದಲಿತ ಪರ ಸಂಘಟನೆ ದಲಿತರನ್ನು ಜಾಗೃತಗೊಳಿಸುವ, ಸಂಘಟಿಸುವ ಕಾರ್ಯದಲ್ಲಿ ನಿರತವಾಗಿರುವುದು ಕಂಡುಬರುತ್ತದೆ. ನಂತರಲ್ಲಿ ಜಾನ್‌ರತ್ನಂರವರಿಂದ ದ್ರಾವಿಡ ಕಜಾಘಂ, ಆರ್. ಶ್ರೀನಿವಾಸನ್‌ರವರಿಂದ ಆದಿ-ದ್ರಾವಿಡ ಮಹಾಜನಸಭಾ, ತಮಿಳುನಾಡಿನ ಆರಂಭದ ಸಂಘಟನೆಗಳಲ್ಲಿ ಪ್ರಬಲ ಸಂಘಟನೆಗಳಾಗಿ ಕಂಡು ಬಂದಿದ್ದು, ದಲಿತರ ಸಾಮಾಜಿಕ, ರಾಜಕೀಯ, ಸಮಾನತೆ ಹಕ್ಕುಗಳಿಗಾಗಿ ಪ್ರಯತ್ನಿಸಿರುವುದು ಕಂಡುಬರುತ್ತದೆ. 1909ರಲ್ಲಿ ಮದ್ರಾಸ್ ವಿಭಾಗದಲ್ಲಿ ಸ್ಥಾಪಿತವಾದ ಡಿಪ್ರೆಸ್ಸೆಡ್ ಕ್ಲಾಸಸ್ ಮಿಷನ್ ಸೊಸೈಟಿ ಆಫ್ ಇಂಡಿಯಾ, ರಾಷ್ಟ್ರೀಯ ದಲಿತ ಚಳುವಳಿಯೊಂದಿಗೆ ಗುರುತಿಸಿಕೊಂಡು ಚಳುವಳಿ ನಡೆಸಿರುವ ಅಂಶಗಳು ಕಂಡುಬರುತ್ತದೆ. ನಂತರದಲ್ಲಿ, ಡಿಪ್ರೆಸ್ಸೆಡ್ ಕ್ಲಾಸಸ್ ಇಲೇವೆಷನ್ ಸೊಸೈಟಿ ಆಫ್ ಸೌತ್ ಇಂಡಿಯಾ, ನಂದನರ್ ಮಹಾಜನ ಸಭಾ, ಪಂಚಮ ಕಾಲ್ವಿ ಅಭಿವರ್ತಿ-ಅಭಿಮಾನ ಸಂಘಗಳು ದಲಿತ ಸಮುದಾಯವನ್ನು ಸಂಘಟಿಸಿ, ಜಾಗೃತಿ ಮೂಡಿಸುವುದರೊಂದಿಗೆ ಸಮಾನತೆ ಹಕ್ಕುಗಳಿಗಾಗಿ ಪ್ರಬಲ ಹೋರಾಟವನ್ನು ಅಂಬೇಡ್ಕರ್ ಪೂರ್ವಯುಗದ ತಮಿಳುನಾಡಿನಲ್ಲಿ ನಡೆಸಿರುವುದು ಸ್ಪಷ್ಟವಾಗುತ್ತದೆ.

ಅಂಬೇಡ್ಕರ್ ಪೂರ್ವಯುಗದ ಕರ್ನಾಟಕ ದಲಿತ ಚಳುವಳಿ ಬೇರೆ ರಾಜ್ಯಗಳಿಗೆ ಹೋಲಿಸಿದರೆ, ತುಂಬಾ ನಿಧಾನವಾಗಿ ಕಂಡು ಬಂದಿದೆ. ಕರ್ನಾಟಕದ ಹೆಚ್ಚಿನ ಭಾಗ ಮೈಸೂರು ಸಂಸ್ಥಾನದ ಆಳ್ವಿಕೆಗೆ ಒಳಪಟ್ಟಿದ್ದರಿಂದ, ಜಾತಿ ವಿರೋದಿ ಚಳುವಳಿ ಕಾಣಿಸಿಕೊಂಡಿದ್ದು ಸುಮಾರು 1915-1916ರ ಅವಧಿಯಲ್ಲಿ. ದಲಿತರು ಆರಂಭದಲ್ಲಿ ಜಾಗೃತಗೊಂಡು ಬ್ರಾಹ್ಮಣೇತರ

ಚಳುವಳಿಯೊಂದಿಗೆ ಗುರುತಿಸಿಕೊಂಡು ನಂತರದಲ್ಲಿ, ಪ್ರತ್ಯೇಕ ದಲಿತ ಸಂಘಟನೆಗಳ ಮೂಲಕ ಚಳುವಳಿ ನಡೆಸಿರುವ ಅಂಶಗಳನ್ನು ಗಮನಿಸಬಹುದು. ಮುರ್ಗೇಶ ಪಿಳ್ಳೈ, ಕೆ. ಮಾದಯ್ಯ, ಕುಡುಮಲ್ ರಂಗರಾವ್ ಮುಂತಾದ ದಲಿತ ನಾಯಕರು ಆದಿ-ದ್ರಾವಿಡ ಅಭಿವೃದ್ಧಿ ಸಂಘ, ಆದಿ-ಜಾಂಬವ ಸಂಘಗಳ ಮೂಲಕ ದಲಿತರಲ್ಲಿ ಜಾಗೃತಿ ಮೂಡಿಸಿ, ಸಾಮಾಜಿಕ, ರಾಜಕೀಯ ಚಳುವಳಿಯನ್ನು ನಡೆಸಿರುವ ಅಂಶಗಳು ಸ್ಪಷ್ಟವಾಗಿವೆ. ಮುಂದೆ ಕರ್ನಾಟಕದಲ್ಲಿ ಪ್ರಬಲ ನಾಯಕರು, ಸಂಘಟನೆಗಳು ಕಾಣಿಸಿಕೊಂಡು ರಾಷ್ಟ್ರೀಯ ದಲಿತ ಚಳುವಳಿಯೊಂದಿಗೆ ಗುರುತಿಸಿಕೊಳ್ಳುವುದನ್ನು ಕಾಣುತ್ತೇವೆ.

ಅಂಬೇಡ್ಕರ್ ಪೂರ್ವಯುಗದ ಕೇರಳ ರಾಜ್ಯದಲ್ಲಿನ ದಲಿತ ಚಳುವಳಿ ಸ್ವಾತಂತ್ರ್ಯ ಚಳುವಳಿ ಆರಂಭದಿಂದಲ್ಲೆ, ಪ್ರಬಲ ಚಳುವಳಿಯಾಗಿ ಕಾಣಿಸಿಕೊಂಡಿರುವುದು ಕಂಡುಬರುತ್ತದೆ. ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕೇರಳದ ದಲಿತರು ಬಹುಬೇಗ ಜಾಗೃತಗೊಂಡು ತಮ್ಮ ಮೇಲಿನ ದೌರ್ಜನ್ಯ, ಶೋಷಣೆ, ಅಸ್ಪೃಶ್ಯತೆಯ ವಿರುದ್ಧ ಪ್ರತಿಭಟಿಸಿರುವ ಸತ್ಯಾಂಶ ಗಮನಕ್ಕೆ ಬರುತ್ತದೆ. ಕೇರಳದಲ್ಲಿ ಮೊದಲಿಗೆ ಶಾನ್ನರ್ ಕ್ರಾಂತಿ, ಶ್ರೀ ನಾರಾಯಣ ಗುರುರವರ ಚಳುವಳಿ, ಅಯ್ಯಂಕಾಳಿಯವರ ಹೋರಾಟಗಳು ಪ್ರಧಾನವಾಗಿವೆ. ಕೇರಳದ ಅಸ್ಪೃಶ್ಯರು ಕ್ರಿಶ್ಚಿಯನ್ ಮಿಷನರಿಗಳಿಂದ ದೊರೆತ ಶಿಕ್ಷಣದ ಅವಕಾಶವನ್ನು ಪಡೆದು ಬಹುಬೇಗ ಜಾಗೃತರಾಗಿ ಮೇಲ್ವರ್ಗದ ಜಾತಿ ದಬ್ಬಾಳಿಕೆಯನ್ನು ಅಸಂಘಟಿತವಾಗಿಯೇ ಪ್ರತಿಭಟಿಸಿ, ಯಶ್ವಸಿಯಾದರು. ಸ್ತ್ರೀಯರ ಎದೆ ಬಟ್ಟೆಯ ಪ್ರಶ್ನೆಯೊಂದಿಗೆ ಹುಟ್ಟಿಕೊಂಡ ಕ್ರಾಂತಿ, ಸಮಾನತೆಯ ಬದುಕಿನ ಎಲ್ಲಾ ಹಕ್ಕು ಸ್ಥಾಪನೆಗಾಗಿ ನಡೆಸಿದ ಮೊದಲ ದಲಿತರ ಹೋರಾಟವಾಗಿದೆ.

ದಲಿತರ ಪರ ಹೋರಾಟ ನಡೆಸಿದ ಪ್ರಮುಖ ಸಾಮಾಜಿಕ ಸುಧಾರಕರಾದ ಶ್ರೀ ನಾರಾಯಣ ಗುರುರವರ ಚಳುವಳಿ ಕೇರಳದ ದಲಿತ ಚಳುವಳಿ ಚರಿತ್ರೆಯಲ್ಲಿ ಪ್ರಮುಖವಾಗಿದೆ. ಇವರು ದಲಿತರ ಜಾಗೃತಿ, ಆತ್ಮವಿಶ್ವಾಸ, ಗೌರವಯುತ ಹೊಸ ಬದುಕನ್ನು ಕೊಡಿಸುವ ಪ್ರಯತ್ನದ ಚಳುವಳಿ ನಡೆಸಿದರು. ಅವರಿಗಾಗಿ ಹೊಸ ದೇವಾಲಯದ ಸ್ಥಾಪನೆ, ಶಿಕ್ಷಣ ಸಂಸ್ಥೆಗಳನ್ನು ಹುಟ್ಟುಹಾಕಿದ್ದು ಗಮನಾರ್ಹ. ಕೇರಳದ ಅಸ್ಪೃಶ್ಯ ಮತ್ತು ಶೋಷಿತ ವರ್ಗದಲ್ಲಿ ಸಾಮಾಜಿಕ ಜಾಗೃತಿ ಮೂಡಿಸುವ ಆಂದೋಲನಕ್ಕಾಗಿ ಧರ್ಮ ಪರಿಪಾಲನಾ ಯೋಗಂ ಎಂಬ ಪ್ರಮುಖ ಸಂಘಟನೆಯನ್ನು ಹುಟ್ಟುಹಾಕಿದರು. ಕುಮಾರನ್ ಅಸನ್, ಡಾ. ಪಲ್ಪು ಮುಂತಾದವು ಈ

ಸಂಘಟನೆಯಡಿಯಲ್ಲಿ ದಲಿತ ಮತ್ತು ಶೋಷಿತರ ಅಭಿವೃದ್ಧಿಗಾಗಿ ಕೈಗೊಂಡ ಕಾರ್ಯಗಳು ಪ್ರಮುಖವಾಗಿವೆ. ಕೇರಳದಲ್ಲಿ ಶ್ರೀ ಐಯ್ಯಂಕಾಳಿಯವರಿಂದ 1905ರಂದು ಸ್ಥಾಪಿತವಾದ ಸಾಧುಜನ ಪರಿಪಾಲನ ಯೋಗಂ ಮತ್ತು ಪ್ರತ್ಯಕ್ಷ ರಕ್ಷಾ ದೇವ ಸಭಾ, ಸಮಸ್ತ ಕೊಚ್ಚಿನ್ ಪುಲಯಾ ಮಹಾಸಭಾ, ಮತ್ತು ಸಹೋದರರ ಸಂಘಂ ದಲಿತರ ಧಾರ್ಮಿಕ ಶೈಕ್ಷಣಿಕ, ಸಾಮಾಜಿಕ, ಮತ್ತು ರಾಜಕೀಯ ಹೋರಾಟವನ್ನು ಅಂಬೇಡ್ಕರ್ ಪೂರ್ವಯುಗದಲ್ಲೇ ಪ್ರಬಲವಾಗಿ ನಡೆಸಿವೆ. ದಲಿತರು ಮತ್ತು ದಲಿತೇತರ ನಾಯಕತ್ವದಿಂದ ಕೂಡಿದ ಕೇರಳದ ದಲಿತ ಚಳುವಳಿ ದಲಿತರ ಜಾಗೃತಿ, ಸಮಾನತೆ ಹಕ್ಕುಗಳಿಗಾಗಿ ನಡೆಸಿರುವ ಸ್ವರೂಪವನ್ನು ಹೊಂದಿದೆ. ಶ್ರೀನಾರಾಯಣಗುರು ಮತ್ತು ಶ್ರೀ ಐಯ್ಯಂಕಾಳಿಯವರ ಹೋರಾಟವು ಅಂಬೇಡ್ಕರ್ ಯುಗದಲ್ಲೂ ಪ್ರಧಾನ ಪಾತ್ರ ವಹಿಸುತ್ತದೆ.

ನಾಲ್ಕನೇಯದಾಗಿ, ಅಂಬೇಡ್ಕರ್ ಯುಗದ ದಲಿತ ಚಳುವಳಿಯನ್ನು ದಕ್ಷಿಣ ಭಾರತದ ರಾಜ್ಯಗಳಾದ ಆಂಧ್ರಪ್ರದೇಶ, ತಮಿಳುನಾಡು, ಕರ್ನಾಟಕ ರಾಜ್ಯ ಮತ್ತು ಕೇರಳ ರಾಜ್ಯಗಳ ಪ್ರತ್ಯೇಕವಾಗಿ ಪರಿಶೀಲಿಸಿದಾಗ, ದಕ್ಷಿಣ ಭಾರತದಲ್ಲಿ ದಲಿತ ಚಳುವಳಿಯು ಪ್ರಬಲವಾಗಿರುವುದು ಕಂಡುಬರುತ್ತದೆ. ಪ್ರತಿ ರಾಜ್ಯಗಳಲ್ಲೂ ದಲಿತರು ಸಂಘಟನೆಗಳ ಮೂಲಕ ತಮ್ಮ ಹಕ್ಕುಗಳಿಗಾಗಿ ಚಳುವಳಿ ನಡೆಸಿರುವ ಅಂಶಗಳು ಮತ್ತು ದಲಿತ ಪರ ದಲಿತೇತರ ನಾಯಕರು ನಡೆಸಿರುವ ಹೋರಾಟದ ಸ್ವರೂಪತೆ ಗಮನಾರ್ಹವಾಗಿದೆ. ಅಂಬೇಡ್ಕರ್ ಯುಗದಲ್ಲೇ, ಭಾರತದಲ್ಲಿ ರಾಷ್ಟ್ರೀಯ ದಲಿತ ಚಳುವಳಿಯಾಗಿ ಗುರುತಿಸಿಕೊಂಡು, ಸಾಮಾಜಿಕ, ರಾಜಕೀಯ ಪ್ರಬಲ ಹೋರಾಟವನ್ನು ಅಂಬೇಡ್ಕರ್ ರಾಷ್ಟ್ರೀಯ ದಲಿತ ನಾಯಕತ್ವದಲ್ಲಿ ನಡೆಸಿರುವುದು ಸ್ಪಷ್ಟವಾಗುತ್ತದೆ. ಆಂಧ್ರ ಪ್ರದೇಶದಲ್ಲಿ ಅಂಬೇಡ್ಕರ್ ಪೂರ್ವಯುಗದಲ್ಲೇ, ದಲಿತ ಚಳುವಳಿಯನ್ನು ಮುನ್ನಡೆಸುತ್ತಿದ್ದ ಭಾಗ್ಯರೆಡ್ಡಿವರ್ಮ, ಶ್ರೀ ಗುಡುರುರಾಮಚಂದ್ರರಾವ್, ಅರಿಗಯ್ಯ ರಾಮಸ್ವಾಮಿಯವರು ಈ ಯುಗದಲ್ಲು ದಲಿತ ಚಳುವಳಿಯನ್ನು ಪ್ರಬಲಗೊಳಿಸಿರುವುದು ಕಂಡುಬರುತ್ತದೆ. 1917ರಲ್ಲಿ ಕಾಣಿಸಿಕೊಂಡ ಆದಿ-ಆಂಧ್ರ ಮಹಾಜನಸಭಾ, ಆದಿ-ಹಿಂದು ಮಹಾಸಭಾ, ಅರುಂಧತಿಯ ಮಹಾಸಭಾ, ಆದಿ ದ್ರಾವಿಡ ಶಿಕ್ಷಣ ಸಂಘ, ಅಂಬೇಡ್ಕರ್‌ವಾದಿ ಯುವಕ ಸಂಘ, ಹೈದರಾಬಾದ್ ರಾಜ್ಯ ದಲಿತ ವರ್ಗಗಳ ಸಂಘಟನೆ, ದಿ. ಹೈದರಾಬಾದ್ ಸ್ಟೇಟ್ ಆದಿ-ಹಿಂದು ಮಹಾಸಭಾ, ದಿ ಹೈದರಾಬಾದ್ ಸ್ಟೇಟ್ ಸೆಡ್ಯೂಲ್ಡ್ ಕಾಸ್ಟ್(ಆದಿ-ಹಿಂದೂ) ಪೆಡರೇಷನ್, ಇಂಡಿಪೆಂಡೆಂಟ್ ಸೆಡ್ಯುಲ್ಡ್ ಕಾಸ್ಟ್ಸ್ ಪೆಡರೇಷನ್, ಮತ್ತು ಆರುಂಧತಿಯ ಮಾತಂಗ ಮಹಾಸಭಾಗಳು ಪ್ರಮುಖವಾಗಿವೆ.

ಈ ಎಲ್ಲಾ ಸಂಘಟನೆಗಳು ಆಂಧ್ರದಲ್ಲಿ ದಲಿತರನ್ನು ಜಾಗೃತಗೊಳಿಸಿ, ಸಂಘಟಿಸಿ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ ಹೋರಾಟವನ್ನು ಮಾಡಿರುವುದು ಕಂಡುಬರುತ್ತದೆ. ಆ ಅವದಿಯಲ್ಲಿ ಅಂಬೇಡ್ಕರ್‌ರವರ ಪ್ರಭಾವ ಆಂಧ್ರದ ದಲಿತ ಚಳುವಳಿಯ ಮೇಲೆ ಆಗುವುದರೊಂದಿಗೆ, ಅಂಬೇಡ್ಕರ್‌ವಾದಿ ಯುವಕ ಸಂಘ ಎಂಬ ಸಂಘಟನೆಗಳು ಹುಟ್ಟಿಕೊಂಡು ರಾಷ್ಟ್ರೀಯ ದಲಿತ ಚಳುವಳಿಯೊಂದಿಗೆ ಗುರುತಿಸಿಕೊಂಡಿರುವುದು ಕಂಡುಬರುತ್ತದೆ.

ಅಂಬೇಡ್ಕರ್ ಯುಗದ ತಮಿಳುನಾಡಿನ ದಲಿತ ಚಳುವಳಿ ಪರಿಶೀಲಿಸಿದಾಗಲೂ, ಪ್ರಬಲ ಸಂಘಟನೆಗಳು, ಚಳುವಳಿ ನಡೆದಿರುವ ಅಂಶಗಳು ಕಂಡುಬರುತ್ತವೆ. ತಮಿಳುನಾಡಿನಲ್ಲೂ ದಲಿತರ ಮತ್ತು ದಲಿತೇತರ ನಾಯಕತ್ವದ ದಲಿತ ಪರ ಚಳುವಳಿಯ ಸ್ವರೂಪ ಕಂಡುಬರುತ್ತದೆ. ಅಂಬೇಡ್ಕರ್ ಯುಗದ ತಮಿಳುನಾಡಿನ ಪ್ರಮುಖ ಸಂಘಟನೆಗಳಾದ ದ್ರಾವಿಡ ಮಹಾಜನ ಸಭಾ ಮದ್ರಾಸ್, ದೇವೇಂದ್ರ ಕುಲ ಮಹಾಜನ ಸಭಾ, ತಮಿಳುನಾಡು ಹರಿಜನಸೇವಾಕ್ ಸಂಘ, ದಲಿತರ ಪರ ಅವರ ಜಾಗೃತಿ, ಹಕ್ಕುಗಳಿಗಾಗಿ ಚಳುವಳಿ ನಡೆಸಿರುವುದು ಕಂಡುಬರುತ್ತದೆ. ದೇವಾಲಯ ಪ್ರವೇಶ, ಸಾಮಾಜಿಕ ಸಮಸ್ಯೆ, ರಾಜಕೀಯ ಹಕ್ಕು, ಸಮಾನತೆಗಾಗಿ ದಲಿತ ಚಳುವಳಿಯನ್ನು ನಡೆಸಿವೆ. ಹಾಗೆಯೆ, ಈ.ವಿ. ರಾಮಸ್ವಾಮಿ ಪೆರಿಯಾರ್‌ರವರ ಹೋರಾಟ ತಮಿಳುನಾಡಿನ ದಲಿತ ಚರಿತ್ರೆಯಲ್ಲಿ ಪ್ರಮುಖವಾಗುತ್ತದೆ. ಅಸ್ಪೃಶ್ಯತೆ ವಿರೋಧಿ ಚಳುವಳಿ ಕೈಗೊಳ್ಳುವುದರೊಂದಿಗೆ, ವೈಕಂನಲ್ಲಿ ನಡೆದ ದೇವಾಲಯ ಪ್ರವೇಶ ಚಳುವಳಿ ಪ್ರಮುಖವಾಗಿದೆ. ಇವರ ಸ್ವ ಗೌರವ ಚಳುವಳಿ ದಲಿತರಲ್ಲಿ ಆತ್ಮಾಭಿಮಾನ, ಬದುಕಿನ ಜಾಗೃತಿ ಮೂಡಿಸುವುದರೊಂದಿಗೆ ದಲಿತ ಚಳುವಳಿಗೊಂದು ಹೊಸ ಚೈತನ್ಯ ತುಂಬಿತು. ತಮಿಳುನಾಡಿನ ದಲಿತ ಚಳುವಳಿ ಅಂಬೇಡ್ಕರ್ ಯುಗದಲ್ಲಿ ಪೂರ್ಣವಾಗಿ ದಲಿತರನ್ನು ಸಂಘಟಿಸಿ ಚಳುವಳಿ ನಡೆಸಿರುವುದು ಸ್ಪಷ್ಟವಾಗುತ್ತದೆ.

ಅಂಬೇಡ್ಕರ್ ಯುಗದ ಕರ್ನಾಟಕ ದಲಿತ ಚಳುವಳಿ ಹೆಚ್ಚು ಪ್ರಭಾವಿತ ಹೋರಾಟವನ್ನು ನಡೆಸಿರುವ ಅಂಶಗಳು ಕಂಡುಬರುತ್ತವೆ. ಏಕೆಂದರೆ, ಅಂಬೇಡ್ಕರ್ ಪ್ರಭಾವ ಮತ್ತು ನೇರ ಸಂಪರ್ಕ ಈ ರಾಜ್ಯದ ಮೇಲೆ ಹೆಚ್ಚು ಇತ್ತು. ಈ ಯುಗದಲ್ಲಿ ಕರ್ನಾಟಕ ಬಹಿಷ್ಕೃತ ಸಂಘ, ದಿ ಮೈಸೂರು ಸ್ಟೇಟ್ ಆ್ಯಂಟಿ ಅಂಟಚಬಲಿಟಿ ಲೀಗ್, ಆದಿ ಕರ್ನಾಟಕ ಸಂಘ, ದಿ ಕರ್ನಾಟಕ ಡಿಪ್ರೆಸ್ಡ್ ಕ್ಲಾಸ್‌ಯುತ್ ಅಸೋಷಿಯೆಷನ್ ಮುಂತಾದ ಪ್ರಮುಖ ದಲಿತ ಸಂಘಟನೆಗಳು ಹಾಗೂ ಮುರುಗೇಶ ಪಿಳ್ಳೈ, ದೇವರಾಯಿ ಇಂಗಳೆ, ಐ.ಕೆ. ಮಾದಯ್ಯ ಡಿ.ಎನ್.ಮಾದಲೆ, ಬಲವಂತರಾವ್

ವಾರ್ಲೆ ಮುಂತಾದ ದಲಿತ ನಾಯಕರ ನಾಯಕತ್ವದಿಂದ ಪ್ರಬಲ ದಲಿತ ಚಳುವಳಿ ನಡೆದಿರುವುದು ಕಂಡುಬರುತ್ತದೆ. ದೇವರಾಯಿ ಇಂಗಳೆ 1922ರಲ್ಲಿ ಕರ್ನಾಟಕ ಬಹಿಷ್ಕೃತ ಸಂಘದ ಮೂಲಕ ದಲಿತರನ್ನು ಜಾಗೃತಗೊಳಿಸಿ ಸಂಘಟಿಸುವ ಕಾರ್ಯವನ್ನು ಮಾಡಿದರು. ಮೊದಲಿಗೆ ಕರ್ನಾಟಕಕ್ಕೆ ಅಂಬೇಡ್ಕರನ್ನು ನಿಪ್ಪಾಣಿಗೆ ಕರೆತಂದು ಪರಿಚಯಿಸಿದ ಕೀರ್ತಿಯು ಇವರಿಗೆ ಸಲ್ಲುತ್ತದೆ. ನಂತರ, ಆದಿ-ಕರ್ನಾಟಕ ಸಂಘ ದಲಿತರ ಅನನ್ಯತೆಯ ಸಂಘಟನೆಯಾಗಿ ಕಾಣಿಸಿಕೊಂಡು ಮೈಸೂರು ಪ್ರಾಂತ್ಯದ ದಲಿತರನ್ನು ಸಂಘಟಿಸುವ ಪ್ರಯತ್ನ ಮಾಡಿರುವುದು ಕಂಡುಬರುತ್ತದೆ. ಅಂಬೇಡ್ಕರ್ ಪ್ರಭಾವದಿಂದ ಕರ್ನಾಟಕ ದಲಿತ ವರ್ಗ ಯುವ ಸಂಘಟನೆ ಕಾಣಿಸಿಕೊಂಡು ಅವರ ಹೋರಾಟ, ತತ್ವಗಳನ್ನು ದಲಿತ ಚಳುವಳಿಯಲ್ಲಿ ಒಂದಾಗಿಸಿ ಹೋರಾಟ ನಡೆಸಿದೆ. ಚಿಕ್ಕಲಿಂಗಯ್ಯ, ಮೌಂಟ್ ಮುರ್ಗೆಶನ್, ಸಿದ್ದಯ್ಯ, ಬಲವಂತರಾವ್ ವಾರ್ಲೆ ಮುಂತಾದವರು ದಲಿತ ಚಳುವಳಿಯನ್ನು ಮುನ್ನಡೆಸುವ ಕಾರ್ಯಮಾಡಿರುವರು. ಅಂಬೇಡ್ಕರ್‌ರವರ ಹೆಚ್ಚು ಪ್ರಭಾವ ಇದ್ದ ಕಾರಣ ಕರ್ನಾಟಕದಲ್ಲಿ ಹೆಚ್ಚಿನದಾಗಿ ಮಹಾರಾಷ್ಟ್ರ ಮಾದರಿಯ ದಲಿತ ಚಳುವಳಿ ಕಂಡುಬರುತ್ತದೆ.

ಅಂಬೇಡ್ಕರ್ ಯುಗದ ಕೇರಳದಲ್ಲಿ ದಲಿತ ಚಳುವಳಿ ಪ್ರಬಲವಾಗಿದ್ದು, ಶ್ರೀ ನಾರಾಯಣ ಗುರುವರ ಚಳುವಳಿ, ಐಯ್ಯಂಕಾಳಿಯವರ ಹೋರಾಟ ಮತ್ತು ದೇವಾಲಯ ಪ್ರವೇಶ ಚಳುವಳಿಗಳು, ಹಾಗೂ ಪ್ರಮುಖ ದಲಿತ ಸಂಘಟನೆಗಳು ಪ್ರಧಾನವಾಗಿವೆ. ದೇವಾಲಯ ಪ್ರವೇಶ ಚಳುವಳಿಯಲ್ಲಿ ವೈಕಂ ದೇವಾಲಯ ಹಾಗೂ ಗುರುವಾಯೂರ್ ದೇವಾಲಯ ಪ್ರವೇಶ ಚಳುವಳಿ ಕೇರಳ ದಲಿತ ಚಳುವಳಿ ಚರಿತ್ರೆ ಮತ್ತು ಭಾರತದ ದಲಿತ ಚಳುವಳಿ ಚರಿತ್ರೆಯಲ್ಲಿ ಪ್ರಮುಖವಾಗುವುದನ್ನು ಗುರುತಿಸುತ್ತೇವೆ. ವೈಕಂ ಸತ್ಯಾಗ್ರಹದಲ್ಲಿ ಗಾಂಧೀಜಿ ನೇತೃತ್ವದ ಕಾಂಗ್ರೆಸ್ ನಡೆದುಕೊಂಡ ರೀತಿಯ ಬಗೆಗಿನ ಚರ್ಚೆ ಗಮನಾರ್ಹವಾಗಿದೆ. ದಲಿತರಿಗೆ ಕೇರಳದಲ್ಲಿ ನಿರಾಕರಿಸಲಾದ ದೇವಾಲಯ ಪ್ರವೇಶ, ರಸ್ತೆ, ಮುಂತಾದ ಸಮಾನತೆ ಹಕ್ಕುಗಳ ಪ್ರತಿಪಾದನೆಯ ಚಳುವಳಿ ಕಂಡುಬರುತ್ತದೆ. ಐಯ್ಯಂಕಾಳಿಯವರ ಚಳುವಳಿ ಕೇರಳದ ದಲಿತರನ್ನು ಒಗ್ಗೂಡಿಸಿ ಸಾಮಾಜಿಕ ಸುಧಾರಣಾ ಕ್ರಾಂತಿಯನ್ನೆ ಮಾಡಿತು. ಅಸ್ಪೃಶ್ಯರ ಸಮಸ್ಯೆ, ಅವರ ಅಭಿವೃದ್ಧಿಗಾಗಿ ಶ್ರಮಿಸಿದ ನಿರಂತರ ಪ್ರಯತ್ನ ಕಂಡುಬರುತ್ತದೆ. ಪ್ರಮುಖ ಸಂಘಟನೆಗಳಾದ ಚೆರ್‌ಮರ್ ಮಹಾಜನಸಭಾ, ದಿ ಚೆರಮರ್ ಕ್ರಿಶ್ಚಿಯನ್ ಮಹಾಜನ ಸಂಘಂ, ಕರಪುರಂ ಎಜಾವ ಯುವಜನ, ಅಖಿಲಭಾರತ ಹರಿಜನ ಸೇವಕ ಸಂಘ, ಆದಿ-ಕೇರಳೋತರಣ ಸಂಘಂ ಅಖಿಲ ತ್ರವಣಕೂರು ಪುಲಯ ಮಹಾಸಭಾಗಳು ಕೇರಳದ ದಲಿತ ಚಳುವಳಿಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

ಕೇರಳದ ದಲಿತರು ದಲಿತರ ನಾಯಕತ್ವ ಮತ್ತು ದಲಿತೇತರರ ನಾಯಕತ್ವದ ಮೂಲಕ ತಮ್ಮ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ರಾಜಕೀಯ ಹಕ್ಕುಗಳ ಸಮಾನತೆಗಾಗಿ ಚಳುವಳಿ ನಡೆಸಿರುವುದು ಸ್ಪಷ್ಟವಾಗುತ್ತದೆ.

ದಕ್ಷಿಣ ಭಾರತದ ದಲಿತ ಚಳುವಳಿ ಸ್ವಾತಂತ್ರ್ಯ ಹೋರಾಟದ ಅವದಿಯಲ್ಲಿ ಪ್ರದಾನವಾಗಿ ಗುರುತಿಸಲ್ಪಟ್ಟಿದ್ದು, ಪ್ರಮುಖ ಸಂಘಟನೆಗಳು ಮತ್ತು ನಾಯಕರುಗಳ ನಾಯಕತ್ವದಿಂದ ಪ್ರಬಲ ಹೋರಾಟ ನಡೆಸಿರುವುದು ಕಂಡುಬರುತ್ತದೆ. ಅಂಬೇಡ್ಕರ್ ಯುಗದಲ್ಲಿ ಮಾತ್ರ ದಲಿತ ಚಳುವಳಿ ಕಂಡುಬರುವುದಲ್ಲದೆ, ಅಂಬೇಡ್ಕರ್ ಪೂರ್ವಯುಗದಲ್ಲೂ ದಕ್ಷಿಣ ಭಾರತದ ರಾಜ್ಯಗಳಲ್ಲಿ ದಲಿತ ಸಂಘಟನೆಗಳು ಮತ್ತು ಚಳುವಳಿ ನಡೆದಿರುವ ಅಂಶಗಳು ದೃಡಪಟ್ಟಿವೆ. ಅಂಬೇಡ್ಕರ್ ಪೂರ್ವಯುಗದಲ್ಲಿ ಕಂಡುಬಂದ ದಲಿತ ಸಂಘಟನೆಗಳು ಮುಂದೆ ಮತ್ತು ಚಳುವಳಿಯಾಗಿ ಹೊರಹೊಮ್ಮಲು ಪ್ರೇರಕವಾದವು ಎಂಬುದು ಕಂಡುಬರುತ್ತದೆ. ದಕ್ಷಿಣ ಭಾರತದ ದಲಿತರು ಜಾಗೃತಗೊಂಡು ಚಳುವಳಿ ನಡೆಸಿರುವ ಸ್ವರೂಪವನ್ನು ಗಮನಿಸಿದಾಗ, ಎಲ್ಲಾ ರಾಜ್ಯಗಳಲ್ಲೂ ದಲಿತ ಚಳುವಳಿಯ ಸಮಾನ ಉದ್ದೇಶಿತ ಹೋರಾಟ ಕಂಡುಬರುತ್ತದೆ. ಜಾತಿ ವಿರೋಧಿ, ಅಸ್ಪೃಶ್ಯತೆ ವಿರೋಧ, ದೇವಾಲಯ ರಸ್ತೆ, ಸಾರ್ವಜನಿಕ ಸ್ಥಳಗಳಿಗೆ ಪ್ರವೇಶ ಮತ್ತು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ ಹಕ್ಕುಗಳ ಸಮಾನತೆಯ ಅಂಶಗಳು ಒಂದೇ ಆಗಿವೆ. ಹಾಗಾಗಿ, ಸ್ವಾತಂತ್ರ್ಯ ನಂತರ ದಕ್ಷಿಣ ಭಾರತದಲ್ಲಿ 1970ರ ನಂತರದಲ್ಲಿ ಕಾಣಿಸಿಕೊಂಡ ದಲಿತ ಚಳುವಳಿಗೆ ಮುಂಚಿತವಾಗಿಯೇ ಸ್ವಾತಂತ್ರ್ಯ ಪೂರ್ವದಲ್ಲಿ ಅಂಬೇಡ್ಕರ್ ಪೂರ್ವ ಮತ್ತು ಅಂಬೇಡ್ಕರ್ ಯುಗದಲ್ಲಿ ದಕ್ಷಿಣ ಭಾರತದ ದಲಿತರು ಜಾಗೃತಗೊಂಡು, ಸಂಘಟನೆಗಳ ಮೂಲಕ ತಮ್ಮ ವಂಚಿತ ಹಕ್ಕು, ದೌರ್ಜನ್ಯ, ಶೋಷಣೆ, ಅಸ್ಪೃಶ್ಯತೆ ವಿರುದ್ಧ ಸಮಾನ ಹಕ್ಕುವಿಗಾಗಿ ಸ್ವಾತಂತ್ರ್ಯ ಚಳುವಳಿ ಆರಂಭದಿಂದಲೇ, ನಿರಂತರ ಸ್ವಾತಂತ್ರ್ಯ ಚಳುವಳಿಯ ಜೊತೆಯಲ್ಲೇ ಚಳುವಳಿ ನಡೆಸಿರುವ ಸತ್ಯಾಂಶ ಈ ಅಧ್ಯಯನದಿಂದ ಸ್ಪಷ್ಟವಾಗುತ್ತದೆ.